International Journal of Kannada Research 2015; 1(1): 31-32

International Journal of Kannada Research
www.kannadajournal.com

**ISSN: 2454–5813**
IJSR 2015; 1(1): 31-32
© 2015 IJKS
www.kannadajournal.com
Received: 18-06-2015
Accepted: 23-07-2015

**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**
ಕನ್ನಡ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ-ಬಾಗೇವಾಡಿ, ಜಿಲ್ಲೆ: ಬಿಜಾಪುರ, ಕರ್ನಾಟಕ, ಭಾರತ

**Correspondence**
**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**
ಕನ್ನಡ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ-ಬಾಗೇವಾಡಿ, ಜಿಲ್ಲೆ: ಬಿಜಾಪುರ, ಕರ್ನಾಟಕ, ಭಾರತ

# ಜನಪದರ ಉಸಿರು ಜಾನಪದ ರಂಗಭೂಮಿ

**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**

ಕನ್ನಡ ರಂಗಭೂಮಿಯ ವಿಕಾಸ ಮಾರ್ಗದಲ್ಲಿ ಮೂರು ಪ್ರಮುಖ ಪರಂಪರೆಯಗಳನ್ನು ಗುರುತಿಸ ಬಹುದಾಗಿದೆ. ಅವುಗಳಲ್ಲಿ ಮುಖ್ಯವಾಗಿ ಜನಪದ ರಂಗಭೂಮಿ, ವೃತ್ತಿ ರಂಗಭೂಮಿ, ಮತ್ತು ಹವ್ಯಾಸಿ ರಂಗಭೂಮಿ. ಧರ್ಮದ ಅಂಗವಾಗಿ ಶಿಲ್ಪಕಲೆ, ಸಾಹಿತ್ಯ, ಸಂಗೀತ ಮತ್ತು ಕಲೆಗಳು ಹುಟ್ಟಿ ಬಂದವು. ಅದರಲ್ಲಿ ಜನಪದ ರಂಗಭೂಮಿ ಪ್ರಥಮ ಮತ್ತು ಪ್ರಮುಖವಾಗಿ ಕಂಡುಬರುವಂತಾಗಿದೆ. ರಂಗಭೂಮಿ ಒಂದು ಸಾಂಸ್ಕೃತಿಕ ಬದುಕಿನ ಬಹುಮುಖ್ಯ ಅಂಗ. ಇದು ಮನುಷ್ಯನ ಬದುಕಿನಲ್ಲಿ ಸಾಂಸ್ಕೃತಿಕವಾಗಿ, ಭೌತಿಕವಾಗಿ ಭಾವನಾತ್ಮಕವಾಗಿ ಅಡಗಿರುವ ಶಕ್ತಿ ಅರಳಿಸುವಂತಹದದ್ದು. ಜನಪದ ಕಲೆಗಳು ಮಾನವ ವಿಕಾಸದ ಇತಿಹಾಸದಷ್ಟೆ ವಿಶಾಲವಾದುದಾಗಿವೆ. ಅವುಗಳಲ್ಲಿ ಮುಖ್ಯವಾಗಿ ಯಕ್ಷಗಾನಾ, ಬೈಲಾಟ, ತೊಗಲುಬೊಂಬೆಯಾಟ, ಸಣ್ಣಾಟ, ದೊಡ್ಡಾಟ, ಶ್ರೀಕೃಷ್ಣಪಾರಿಜಾತಾ ಮುಂತಾದವುಳು ಜನಪದ ರಂಗ ಭೂಮಿಗೆ ಪ್ರೇರಣಾ ದಾಯಕವಾಗಿವೆ.

ವರ್ಣರಂಜಿತವಾದ ಬಯಲಾಟಗಳ ರಂಗು ಮೆರಗು ಎಲ್ಲವೂ ಅಂದಿನಿಂದ ಇಂದಿನವರಗೂ ಬೆರೆತು ಬಂದಿದೆ. ಮನಸ್ಸಿಗೆ ತೃಪ್ತಿ ನೀಡಿದೆ. ಬದುಕಿಗೆ ದಾರಿ ತೋರಿದೆ ಹೀಗಾಗಿ ಬಯಲಾಟಗಳು ಅಂದರೆ ದೊಡ್ಡಾಟ, ಸಣ್ಣಾಟ, ಡಪ್ಪಿನಾಟ, ಗೊಂಬೆಯಾಟ, ವೇಷಗಾರರ ಆಟ ಈ ಮುಂತಾದ ಕಲಾ ಪ್ರಕಾರಗಳು ಮನಸ್ಸನ್ನು ಅರಳಿಸುವಲ್ಲಿ, ಸಂಬಂಧಗಳುನ್ನು ಬೆಳಸುವಲ್ಲಿ ಪ್ರಮುಖ ಪಾತ್ರವಹಿಸುತ್ತ ಬಂದಿವೆ. ರಂಗಭೂಮಿ ಯಾವುದೇ ಕಲೆ ಪರಿಶಿಲಿಸಿದರೂ ಅದು ಬದುಕಿನೊಂದಿಗೆ ಬೆರೆತು ಬಂದಿರುವುದನ್ನು ಕಾಣಬಹುದು. ಸಾಹಿತ್ಯ ಮತ್ತು ಕಲೆ ಇವೆರಡು ಜನಪದರ ಬದುಕಿನ ಮೂರ್ತ ರೂಪವಾಗಿ ಅಲ್ಲಿಯ ಸಾಂಸ್ಕೃತಿಕ ಸಂಗತಿಗಳನ್ನು ಅನಾವರಣಗೊಳಿಸುವ ಶಕ್ತಿಯಾಗಿ ವ್ಯಕ್ತಗೊಂಡಿರುವುದು ಕಂಡು ಬರುತ್ತದೆ.

ಸಾಮಾಜಿಕ ಜೀವನದ ಬದಲಾಣೆಯ ಸಂಧರ್ಭಗಳಲ್ಲಿ ವೈಜ್ಞಾನಿಕ ತಳಹದಿಯ ಆಧಾರದ ಮೇಲೆಯೇ ಜನರ ಜೀವನದ ವಿಧಾನಗಳು ಮಾರ್ಪಾಡಾಗುವುದು ಅಥವಾ ಮರೆಯಾಗಿ ಹೊಗುವುದು ಅನಿವಾರ್ಯ. ಇಂದು ಆಧುನಿಕ ಜಗತ್ತಿನಲ್ಲಿ ಜನಪದ ರಂಗಭೂಮಿ ಜಾಗತೀಕರಣ, ಆಧುನೀಕರಣ ಹೊಡತಕ್ಕೆ ತತ್ತರಿಸಿದೆ. ಇದರಿಂದಾಗಿ ಬಯಲಾಟಗಳಿಗೆ ಮೊದಲಿದ್ದ ಅಸ್ತಿತ್ವ ಇಂದಿಲ್ಲ. ಬಯಲಾಟಗಳೆಂದರೆ ಇಂದು ಕೇವಲ ನೆನಪು ಮಾತ್ರವಾಗಿ ಉಳಿದಿದೆ. ಒಂದು ಕಾಲಕ್ಕೆ ಜನಪದ ರಂಗಭೂಮಿ ಬದುಕಿನ ಅವಿಭಾಜ್ಯ ಅಂಗವಾಗಿ ಅದೇ ಬದುಕಾಗಿತ್ತು. ಜನಪದ ರಂಗಭೂಮಿ ಅಂಗೋಪಾಂಗಗಳು ಬದುಕಿ ಅಂಗೋಪಾಂಗಗಳೊಂದಿಗೆ ಬೆರೆತು ಎರಡರ ಸಹಯೋಗದೊಂದಿಗೆ ಜೀವನ ಬೆಳುದು ಬಂದಿರುವುದನ್ನು ಕಾಣುತ್ತೇವೆ, ಆದರೆ ಬದಲಾಗುತ್ತಿರುವ ಸನ್ನಿವೇಶಕ್ಕನುಸಾರವಾಗಿ ರಂಗಭೂಮಿಯ ವೇಷ ಭೂಷಣ, ಪಾತ್ರ ವಿನ್ಯಾಸದಲ್ಲಿ ಬದಲಾವಣೆ ಕಂಡುಬರುತ್ತಿವೆ. ಇದರಿಂದಾಗಿ ಬದುಕು ಮತ್ತು ಜನಪದ ಎರಡನ್ನು ಪ್ರತ್ಯೇಕಿಸಿ ನೋಡುವ ವಾತಾವರಣ ಸೃಷ್ಟಿಕೊಂಡಿದೆ.

ಹಿಗಾಗಿ ಬಯಲಾಟಗಳು ಬೇರೆಬೇರೆ ರೂಪಗಳನ್ನು ತಳೆದು ಆಧುನಿಕ ಜೀವನದಲ್ಲಿ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿವೆ. ವೇಷಭೂಷಣಗಳಲ್ಲಿನ ಸರಳತೆ ಮಾಯವಾಗಿ, ಜನಾಕರ್ಷಣೆ ಕಡಿಮೆಯಾಗಿ ಜನಪದ ಕಲಾವಿದರ ಅನುಭವ ಕಲ್ಪನೆ, ಕಲಿಕೆಗಳೂ ಅಭಿವ್ಯಕ್ತಿಸುವ ವೇದಿಕೆಯಾದ ರಂಗಭೂಮಿ, ಜನ ಸಾಮ್ಯಾನರಿಗೆ ನೀತಿಪಾಠ ಹೇಳಿಕೊಂಡುವಂತಹ ಬಯಲಾಟಗಳ ಮೆರಗು ಕಡಿಮೆಯಾಗಿದೆ.

ಜನಪದ ರಂಗಭೂಮಿ ರಾಮಯಣ, ಮಹಾಭಾರತ, ಪುರಾಣಗಳ ವೈಶಿಷ್ಟೈತೆಯನ್ನು ದಾಖಲು ಮಾಡುತ್ತಿವೆ. ಪಾಶ್ಚಾತ್ಯ ಸಂಸ್ಕೃತಿಯ ಅನುಕರಿಸುತ್ತಿದ್ದಂತೆ ಬಯಲಾಟಗಳಲ್ಲಿನ ಪಾತ್ರಗಳ ವಿನ್ಯಾಸದಲ್ಲಿ ಬದಲಾಗುವುದು ಅನಿವಾರ್ಯವಾಗಿದೆ.

ಹೇಗೆಂದರೆ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರು ವಿಧ್ಯಾರ್ಥಿಗಳಿಗೆ ಕಪ್ಪು ಹಲಗೆಯ ಮೂಲಕ ಶಿಕ್ಷಣ ಕೊಡುವುದರಿಂದ ವಿದ್ಯಾರ್ಥಿಗಳ ಮೇಲೆ ಹೇಗೆ ಒಳ್ಳೆಯ ರೀತಿಯ ಪರಿಣಾಮ ಬೀರುತ್ತದೆಯೋ ಹಾಗೆ ಜನಪದ ರಂಗಭೂಮಿಯು ಕೊಡಾ ಜನರ ಆಸಕ್ತಿಗಳನುಸಾರವಾಗಿ ತಂತ್ರಜ್ಞಾನ ಬಳಕೆಯೊಡನೆ ಜನರನ್ನು ಆಕರ್ಷಿಸುವಲ್ಲಿ ಯಶಸ್ಸು ಕಂಡಿದ್ದರೂ, ಮೊದಲಿದ್ದ ಜನಪದ ಕಲೆಗಳ ವೈಭವ ಇಂದಿಲ್ಲ ಎಂದು ಹೇಳಬಹುದು.

ಜನಪದರು ಅಜ್ಞಾನಿಗಳಲ್ಲ ಶಿಷ್ಟರಂತೆ ಇವರಿಗೆ ಶಿಕ್ಷಣ ತರಬೇತಿ ಇಲ್ಲದಿದ್ದರೂ ಇವರಲ್ಲಿ ಒಂದು ರೀತಿಯ ನಿಯಮ ಸಂಪ್ರದಾಯಕತೆಯನ್ನು ಕಾಣಬಹುದು. ಅದಕ್ಕಾಗಿಯೇ ಇವತ್ತಿಗೂ ಜನಪದ ರಂಗಭೂಮಿ ಚಟುವಟಿಕೆಗಳು ಉಳಿಸುವರ ಉತ್ಸಕದಲ್ಲಿದ್ದಾರೆ. ಒಂದು ಕಾಲಕ್ಕೆ ವೈಭವದಿಂದ ಕೂಡಿದ ಬಯಲಾಟಗಳೂ ಪ್ರಸ್ತುತ ಮಾಧ್ಯಮಗಳಿಂದ ಅದೇ ವೈಭವ ಮುಂದುವರೆಯುವುದು ಸಾಧ್ಯವೆ? ತಲೆಮಾರಿನಿಂದ ಬಳುವಳಿ ರೂಪದಲ್ಲಿದ್ದ ಬಯಲಾಟದ ಸಂಪತ್ತು ಈಗ ಬಹುತೇಕ ನಿಂತು ಹೋಗಿದೆ. ಹಿರಿಯ ಜನಪದ ಕಲಾವಿದರು ಕೈಬಿಟ್ಟಿದ್ದರಿಂದ ಇಂದಿನ ಪೀಳಿಗೆ ಅನುಸರಿಸುವ ಗೋಜಿಗೆ ಹೋಗುತ್ತಿಲ್ಲ. ಹಿಗಾಗಿ ಆಧುನಿಕ ರಂಗಭೂಮಿ ಆ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಕೆಲ ರಂಗಭೂಮಿ ಕಲಾವಿದರು ಸ್ವಯಂ ಪ್ರೇರಿತವಾಗಿ ಪಾಶ್ಚಾತ್ಯ ಸಂಸ್ಕೃತಿಗೆ ಹೊಂದಿಕೊಂಡು ಜನತೆಯ ಅಭಿರುಚಿಗೆ ತಕ್ಕಂತೆ ಜನಾಕರ್ಷಣೆಯ ಸಿನಿಮಾ. ಧಾರವಾಹಿಗಳತ್ತ ಮುಖಮಾಡಿದ್ದಾರೆ.

ಜಾಗತೀಕರಣ, ಉದಾರೀಕರಣ ಅಪಾಯ ಎನಿಸಿದರೂ ಆಧುನಿಕ ರಂಗಭೂಮಿಯೂ ಮೂಲ ಜನಪದ ಕಲೆಯನ್ನು ಉಳಿಸಿಕೊಳ್ಳುವಲ್ಲಿ ವಿಫಲವಾಗಿದೆ. ಕಾಲಘಟ್ಟದ ಸ್ಥಿತಿಗತಿಗಳ ಜೊತಗೆ ಹೊಂದಿಕೊಳ್ಳುತ್ತಲೆ ಜನಪದ ಕಲೆಗಳನ್ನು ಅನುಕರಿಸುವಂತಿರಬೇಕು." ಜಾನಪದ ನಿಂತ ನೀರಲ್ಲ ಇದು ನಿರಂತರವಾಗಿ ಹರಿಯುವ ಜೀವ ನದಿ" ಎಂಬ ಮಾತಿನಂತೆ ಸಂದರ್ಭಕ್ಕೆ ತಕ್ಕಂತೆ ಹೊಂದಿಕೊಳ್ಳುವಂತೆ ಬಳಸಿಕೊಳ್ಳಬೇಕು. ಅಳಿದು ಹೋಗುತ್ತಿರುವ ಜನಪದ ಸಂಪತ್ತು ಉಳಿಸಿಕೊಳ್ಳಬೇಕಾಗಿದೆ.

ಇಂದು ಜನಪದ ಕಲೆಗಳು ಜನಾಶ್ರಯವನ್ನಷ್ಟೆ ಆಶ್ರಯಿಸಿ ಬದುಕಲು ಸಾಧ್ಯವಿಲ್ಲ ಅದರ ಜೊತಗೆ ಜನಪ್ರತಿನಿಧಿಗಳ, ಸಂಘ-ಸಂಸ್ಥೆಗಳ, ಸರ್ಕಾರದ ಸಹಾಯ ಹಸ್ತವೂ ಬೇಕಾಗಿದೆ. ಬದುಕಿನ ಭಾಗವಾಗಿದೆ ಎಂಬಂತೆ ಅಲ್ಲದಿದ್ದರೂ ಅದನ್ನೊಂದು ಸಾಂಸ್ಕೃತಿಕ ಸಂಪತ್ತಾಗಿ ಉಳಸಿಕೊಳ್ಳಲು ಹೋರಾಟ ನಡೆಸುವ ಅಗತ್ಯವಿದೆ. ನಾಟಕವೆಂಬುದು ರಂಗ ಭೂಮಿಯ ಸಲುವಾಗಿ ರಚಿಸಲ್ಪಟ್ಟಿದ್ದರೂ ಅದು ಸಹಿತ ಸಾಹಿತ್ಯದ ಒಂದು ಪ್ರಕಾರವಾಗಿದೆ. ಜನಪದ ರಂಗಭೂಮಿಗೆ ಹಿನ್ನಲೆಯಾಗಿ ಧರ್ಮ್ ಮತ್ತು ಆರಾಧನೆಗಳಿಗೆ ಸಂಭಂದಿಸಿದ ಕುಣಿತಗಳು ಇದ್ದವೆಂಉದನ್ನು ಕಾಣಬಹುದಾಗಿದೆ. ಅದರ ಮೂಂದುವರೆದಭಾಗವಾಗಿ ರಂಗಭೂಮಿ ನಿರ್ಮಾಣ ಮತ್ತು ಅದರ ಮೂಲಕವಾಗಿ ಯಕ್ಷಗಾನ, ದೊಡ್ಡಾಟ, ಸಣ್ಣಾಟ ಮತ್ತು ಸಾಮಾಜಿಕ ನಾಟಕಗಳು ಆಡುವುದರ ಮೂಲಕವಾಗಿ ರಂಗಭೂಮಿ ತನ್ನ ಉನ್ನತತೆಯನ್ನ ಹೆಚ್ಚಿಸಿಕೊಂಡಿತು. ಇತ್ತಿತ್ಲಾಗಿ ಚಲನಚಿತ್ರಗಳು, ಧಾರವಾಹಿಗಳು ಜನಪದರಂಗಭೂಮಿಯನ್ನು ಹಾಳುಗೆಡವಿವೆ ಎಂದು ಹೇಳಿದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು:**


1. ಯಕ್ಷಗಾನ- ಡಾಕೆ ಶಿವರಾಮ ಕಾರಂತ
2. ಜಾನಾಪದ ಸಾಹಿತ್ಯ ದರ್ಶನ- ಡಾ. ಬಿ.ಬಿ. ಹೆಂಡಿ
3. ಮನ್ವಂತರ- ಡಾ. ಚಂದ್ರಶೇಖರ ಕಂಬಾರ
4. ಜಾನಪದ ಸಾಹಿತ್ಯ ದರ್ಶನ- ಶ್ರೀ ತ.ಸು. ಶಾಮರಾಯ
5. ಕನ್ನಡ ನಾಟಕ-ಶ್ರೀ ತ.ಸು. ಶಾಮರಾಯ